# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀಮತಿ ಆದಿಲಕ್ಷ್ಮಮ್ಮ, ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಲಕ್ಷ್ಮೀಪುರ ಗ್ರಾಮ ಪಂಚಾಯಿತಿ ಮತ್ತು ಶ್ರೀಮತಿ ಡಿ.ಪ್ರಮೀಳ ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು, ನೆಲವಂಕಿ ಗ್ರಾಮ ಪಂಚಾಯಿತಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

ಓದಲಾಗಿದೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಕೋಲಾರ ಇವರ ಪತ್ರ ಸಂಖ್ಯೆ:ಜಿ.ಪಂ.ಕೋ/ಸಿಡಿಪಿ(5)ಪಿಡಿಓ/ಸಿಆರ್/8/2016-17, ದಿ:14.06.2018 ಮತ್ತು 04.01.2017.
2. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ:99:ಗ್ರಾಪಂಅ:2017, ದಿ:14.02.2017 ರ ಕಾರಣ ಕೇಳುವ ನೋಟೀಸ್.
3. ಶ್ರೀಮತಿ ಬಿ.ಎನ್.ಪ್ರಮೀಳ ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು, ನೆಲವಂಕಿ ಗ್ರಾಮ ಪಂಚಾಯಿತಿ, ಇವರು ಕಾರಣ ಕೇಳುವ ನೋಟಿಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿ:09.03.2017 ರಂದು ಈ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುತ್ತದೆ.
4. ಶ್ರೀಮತಿ ಆದಿಲಕ್ಷ್ಮಮ್ಮ ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಲಕ್ಷ್ಮೀಪುರ ಗ್ರಾಮ ಪಂಚಾಯಿತಿ, ಇವರು ಕಾರಣ ಕೇಳುವ ನೋಟಿಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿ:09.03.2017 ರಂದು ಈ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುತ್ತದೆ.
5. ಇದೇ ಸಮಸಂಖ್ಯೆಯ ವಿಚಾರಣಾ ನೋಟೀಸಿನ ದಿನಾಂಕ: 04.04.2017, 20.04.2017, 12.05.2017, 30.05.2017, 21.06.2017, 17.07.2017, 31.01.2019 ವಿಚಾರಣೆ ನಡೆದ ದಿನಾಂಕ:29.05.2017, 06.06.2017, 15.07.2017, 05.08.2017, 06.02.2019

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ಶ್ರೀಮತಿ ಆದಿಲಕ್ಷ್ಮಮ್ಮ ಅಧ್ಯಕ್ಷರು, ಲಕ್ಷ್ಮೀಪುರ ಗ್ರಾಮ ಪಂಚಾಯಿತಿ ಮತ್ತು ಶ್ರೀಮತಿ ಡಿ.ಪ್ರಮೀಳ ಅಧ್ಯಕ್ಷರು, ನೆಲವಂಕಿ ಗ್ರಾಮ ಪಂಚಾಯಿತಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ, ಇವರು ಗ್ರಾಮ ಪಂಚಾಯತಿಗಳಲ್ಲಿ ಅವರ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸದೆ ಕೇವಲ ಗುತ್ತಿಗೆ ಆಧಾರದಲ್ಲಿ ಕಾಮಗಾರಿಗಳನ್ನು ನಡೆಸಿ ನರೇಗಾ ಮಾರ್ಗಸೂಚಿಯನ್ನು ಗಾಳಿಗೆ ತೂರಿ ಅವ್ಯವಹಾರ ನಡೆದಿರುವ ಬಗ್ಗೆ ಕುರಿತು ಜಂಟಿ ನಿರ್ದೇಶಕರು (ತೋಟಗಾರಿಕೆ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯರವರು ಪರಿವೀಕ್ಷಣೆ ನಡೆಸಿ ಸರ್ಕಾರಕ್ಕೆ ಸಲ್ಲಿಸಿರುವ ಪರಿಶೀಲನಾ ವರದಿಯನ್ವಯ ಹಾಗೂ ಜಿಲ್ಲಾ ಗುಣನಿಯಂತ್ರಣ ಮಾನೀಟರ್‌ಗಳು ರವರ ಹಣ ದುರಪಯೋಗದ ಕುರಿತು ನೀಡಿರುವ ಶಿಫಾರಸ್ಸಿನನ್ವಯ ರೂ.17,71,000/- ಗಳ ಅವ್ಯವಹಾರ / ಹಣ ದುರಪಯೋಗಕ್ಕೆ ಕಾರಣರಾಗಿರುವ ಶ್ರೀಮತಿ ಆದಿಲಕ್ಷ್ಮಮ್ಮ ಅಧ್ಯಕ್ಷರು, ಲಕ್ಷ್ಮೀಪುರ ಗ್ರಾಮ ಪಂಚಾಯಿತಿ ಮತ್ತು ರೂ.19,22,106/- ಗಳ ಅವ್ಯವಹಾರ / ಹಣ ದುರಪಯೋಗಕ್ಕೆ ಕಾರಣವಾಗಿರುವ ಶ್ರೀಮತಿ ಡಿ.ಪ್ರಮೀಳ ಅಧ್ಯಕ್ಷರು, ನೆಲವಂಕಿ ಗ್ರಾಮ ಪಂಚಾಯಿತಿ, ಶ್ರೀನಿವಾಸಪುರ ತಾಲ್ಲೂಕು, ಈ ಉಭಯ ಅಧ್ಯಕ್ಷರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಹಾಗೂ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯನ್ವಯ ಇವರ ಸದಸ್ಯತ್ವವನ್ನು ರದ್ದುಗೊಳಿಸಲು ಸರ್ಕಾರವು ನಿರ್ದೇಶನ ಮಾಡಿದ್ದು, ಅದರಂತೆ ಸದರಿ ಅಧ್ಯಕ್ಷರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಶ್ರೀನಿವಾಸಪುರ ಇವರಿಗೆ ಸೂಚಿಸಲಾಗಿರುತ್ತದೆ, ಮುಂದುವರೆದು ಶ್ರೀಮತಿ ಆದಿಲಕ್ಷ್ಮಮ್ಮ ಅಧ್ಯಕ್ಷರು, ಲಕ್ಷ್ಮೀಪುರ ಗ್ರಾಮ ಪಂಚಾಯಿತಿ ಮತ್ತು ಶ್ರೀಮತಿ ಡಿ.ಪ್ರಮೀಳ ಅಧ್ಯಕ್ಷರು, ನೆಲವಂಕಿ ಗ್ರಾಮ ಪಂಚಾಯಿತಿ, ಶ್ರೀನಿವಾಸಪುರ ತಾಲ್ಲೂಕು ಈ ಉಭಯ ಅಧ್ಯಕ್ಷರುಗಳ ಸದಸ್ಯತ್ವವನ್ನು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯನ್ವಯ ರದ್ದುಗೊಳಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಕೋಲಾರ ರವರು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43-ಎ ರಡಿ ಕ್ರಮ ವಹಿಸುವ ಪೂರ್ವದಲ್ಲಿ ನಿಯಮಾನುಸಾರ ಕಾರಣ ಕೇಳುವ ನೋಟೀಸನ್ನು ದಿನಾಂಕ: 14.02.2017ರ ರಂದು ಜಾರಿ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಶ್ರೀಮತಿ ಡಿ.ಪ್ರಮೀಳ, ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ನೆಲವಂಕಿ ಗ್ರಾಮ ಪಂಚಾಯಿತಿ ರವರು ಕಾರಣ ಕೇಳುವ ನೋಟೀಸಿಗೆ ಈ ಕೆಳಕಂಡಂತೆ ಉತ್ತರ ಸಲ್ಲಿಸಿರುತ್ತಾರೆ.

- ದಿನಾಂಕ:03.07.2015 ರಿಂದ ನೆಲವಂಕಿ ಗ್ರಾಮ ಪಂಚಾಯಿತಿಯ ಅಧ್ಯಕ್ಷೆಯಾಗಿ ಅವಿರೋಧವಾಗಿ ಆಯ್ಕೆಯಾಗಿರುತ್ತೇನೆ. ನಾನು ಅಧ್ಯಕ್ಷೆಯಾದಾಗಿನಿಂದಲೂ ಉತ್ತಮ ಕೆಲಸಗಳನ್ನು ನಿರ್ವಹಿಸುತ್ತಿದ್ದು ನಮ್ಮ ಗ್ರಾಮಗಳ ಏಳಿಗೆಗಾಗಿ ಮತ್ತು ಮೂಲಭೂತ ಸೌಕರ್ಯಗಳನ್ನು ಜನರಿಗೆ ತಲುಪಿಸಲು ಹಗಲಿರಳು ಶ್ರಮಿಸುತ್ತಿದ್ದೇನೆ. ನನ್ನ ಉತ್ತಮ ಕೆಲಸಗಳಿಂದ ಸ್ಥಾಪಿತ ಹಿತಾಸಕ್ತಿಗಳು ವಿಚಲಿತಗೊಂಡಿದ್ದು ನನ್ನನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲು ಶತಾಯ ಗತಾಯ ಪ್ರಯತ್ನಿಸುತ್ತಿದ್ದಾರೆ. ಕೆಲ ಗ್ರಾಮಸ್ಥರನ್ನು ನನ್ನ ವಿರುದ್ಧ ಎತ್ತಿಗಟ್ಟುತ್ತಿದ್ದು ವಿನಾಕರಣ ನನ್ನ ಮೇಲೆ ವೈಯಕ್ತಿಕವಾಗಿ ಮತ್ತು ನನ್ನ ಕಾರ್ಯವೈಖರಿಯ ಬಗ್ಗೆ ಯಾವುದೇ ರೀತಿಯ ಲೋಪದೋಷಗಳು ಇಲ್ಲದಿದ್ದಾಗ್ಯೂ ವಿನಾಕಾರಣ ನನ್ನ ಮೇಲೆ ಇಲ್ಲಸಲ್ಲದ ಆಪಾದನೆಗಳನ್ನು ಮಾಡಿದ್ದು ಈ ಸಂಬಂಧ ಓಂಬುಡ್ಸ್‌ಮೆನ್ ಜಿಲ್ಲಾ ಪಂಚಾಯತ್ ರವರು ದಿನಾಂಕ:16.05.16 ರ ತಮ್ಮ ಮಧ್ಯಂತರ ಆದೇಶದಲ್ಲಿ ನನ್ನ ಮೇಲೆ ಕಾನೂನಾತ್ಮಕ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಆದೇಶಿಸಿರುತ್ತಾರೆ ಎಂಬ ಕಪೋಲಕಲ್ಪಿತ ವಿಷಯವನ್ನು ಮುಂದಿಟ್ಟುಕೊಂಡು ನನ್ನ ಅಧ್ಯಕ್ಷ ಸ್ಥಾನಕ್ಕೆ ಕುತ್ತು ತರುವ ಹುನ್ನಾರ ನಡೆದಿರುತ್ತದೆ. ಮುಂದುವರೆದು ಓಂಬುಡ್ಸ್‌ಮೆನ್ ಜಿಲ್ಲಾ ಪಂಚಾಯತ್ ರವರ ಮಧ್ಯಂತರ ಆದೇಶದಲ್ಲಿ ಎಲ್ಲೂ ನನ್ನ ವಿರುದ್ಧ ಯಾವುದೇ ರೀತಿಯ ಆಪಾದನೆಯ ಪ್ರಸ್ತಾಪನೆಯಾಗಲಿ ಅಥವಾ ಆದೇಶವಾಗಲಿ ಇರುವುದಿಲ್ಲ. ಅದೂ ಅಲ್ಲದೆ ದೂರುದಾರರು ಯಾವುದೇ ರೀತಿಯ ದೂರನ್ನು ನೆಲವಂಕಿಯ ಗ್ರಾಮ ಪಂಚಾಯಿತಿಯ ಮೇಲಾಗಲಿ ಅಥವಾ ಅಧ್ಯಕ್ಷ / ಉಪಾಧ್ಯಕ್ಷ/ ಸದಸ್ಯರ ಮೇಲಾಗಲಿ ದೂರು ನೀಡಿರುವುದಿಲ್ಲ ಹಾಗೂ ನನ್ನ ಮೇಲೆ ಯಾವುದೇ ರೀತಿಯ ಕ್ರಿಮಿನಲ್ ದಾವೆಯು ದಾಖಲಾಗಿರುವುದಿಲ್ಲ. ಆದುದರಿಂದ ಉಲ್ಲೇಖಿತ ಕಾರಣ ಕೇಳುವ ನೋಟೀಸ್ ಕಾನೂನಿನ ವಿರುದ್ಧವಾಗಿ ನನ್ನ ಮೇಲೆ ಜಾರಿ ಮಾಡಲಾಗಿದೆ ಎಂದು ತಿಳಿಸಿರುತ್ತಾರೆ.
- " ನನ್ನ ಮೇಲೆ ಯಾವುದೇ ರೀತಿಯ ಆರೋಪ / ಆಪಾದನೆಗಳನ್ನು ಮಾಡಿರುವುದಿಲ್ಲ ಆದುದರಿಂದ ಕಲಂ43(ಎ) & ಕಲಂ 48(4)ರ ಅನ್ವಯ ಶಿಸ್ತು ಕ್ರಮ ತೆಗೆದುಕೊಳ್ಳಲು ಸರ್ಕಾರಕ್ಕೆ ಯಾವುದೇ ರೀತಿಯ ಅಧಿಕಾರವು ಇರುವುದಿಲ್ಲ. ನನ್ನ ಮೇಲೆ ಮಾಡಿರುವ ಆಪಾದನೆಗಳು ರುಜುವಾತು ಆಗದೇ ಇರುವ ಕಾರಣ ನನ್ನ ಮೇಲೆ ಜಾರಿ ಮಾಡಿದ ಕಾರಣ ಕೇಳುವ ನೋಟೀಸ್‌ನ್ನು ಹಿಂಪಡೆಯುವಂತೆ" ಕೋರಿರುತ್ತಾರೆ.
- "ನಾನು ಕಡಿಮೆ ವಿದ್ಯಾಭ್ಯಾಸ ಹೊಂದಿದ್ದು, ನನಗೆ ಗಣಕಯಂತ್ರದ ನಿರ್ವಹಣೆ ಜ್ಞಾನ ಇರುವುದಿಲ್ಲ, ನನ್ನ ಅವಧಿಯಲ್ಲಿ ಯಾವುದೇ ವಿಧವಾದ ಅವ್ಯವಹಾರ ನಡೆದಿರುವುದಿಲ್ಲ ಮತ್ತು ಗ್ರಾಮ ಪಂಚಾಯಿತಿಯ ಅಧಿಕಾರಿಗಳ ಮಾರ್ಗದರ್ಶನದಂತೆ ಕಾರ್ಯನಿರ್ವಹಿಸುತ್ತಿದ್ದು ನನಗೆ ನ್ಯಾಯ ಒದಗಿಸಿಕೊಡುವಂತೆ" ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (4) ರಲ್ಲಿ ಶ್ರೀಮತಿ ಆದಿಲಕ್ಷ್ಮಮ್ಮ ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಲಕ್ಷ್ಮೀಪುರ ಗ್ರಾಮ ಪಂಚಾಯಿತಿ ರವರು ಕಾರಣ ಕೇಳುವ ನೋಟೀಸಿಗೆ ಈ ಕೆಳಕಂಡಂತೆ ಉತ್ತರ ಸಲ್ಲಿಸಿರುತ್ತಾರೆ.

- ದಿನಾಂಕ:04.07.2015 ರಿಂದ ಲಕ್ಷ್ಮೀಪುರ ಗ್ರಾಮ ಪಂಚಾಯಿತಿಯ ಅಧ್ಯಕ್ಷೆಯಾಗಿ ಅವಿರೋಧವಾಗಿ ಆಯ್ಕೆಯಾಗಿರುತ್ತೇನೆ. ನಾನು ಅಧ್ಯಕ್ಷೆಯಾದಾಗಿನಿಂದಲೂ ಉತ್ತಮ ಕೆಲಸಗಳನ್ನು ನಿರ್ವಹಿಸುತ್ತಿದ್ದು ನಮ್ಮ ಗ್ರಾಮಗಳ ಏಳಿಗೆಗಾಗಿ ಮತ್ತು ಮೂಲಭೂತ ಸೌಕರ್ಯಗಳನ್ನು ಜನರಿಗೆ ತಲುಪಿಸಲು ಹಗಲಿರಳು ಶ್ರಮಿಸುತ್ತಿದ್ದೇನೆ. ನನ್ನ ಉತ್ತಮ ಕೆಲಸಗಳಿಂದ ಸ್ಥಾಪಿತ ಹಿತಾಸಕ್ತಿಗಳು ವಿಚಲಿತಗೊಂಡಿದ್ದು ನನ್ನನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲು ಶತಾಯ ಗತಾಯ ಪ್ರಯತ್ನಿಸುತ್ತಿದ್ದಾರೆ. ಕೆಲ ಗ್ರಾಮಸ್ಥರನ್ನು ನನ್ನ ವಿರುದ್ಧ ಎತ್ತಿಗಟ್ಟುತ್ತಿದ್ದು ವಿನಾಕರಣ ನನ್ನ ಮೇಲೆ ವೈಯಕ್ತಿಕವಾಗಿ ಮತ್ತು ನನ್ನ ಕಾರ್ಯವೈಖರಿಯ ಬಗ್ಗೆ ಯಾವುದೇ ರೀತಿಯ ಲೋಪದೋಷಗಳು ಇಲ್ಲದಿದ್ದಾಗ್ಯೂ ವಿನಾಕಾರಣ ನನ್ನ ಮೇಲೆ ಇಲ್ಲಸಲ್ಲದ ಆಪಾದನೆಗಳನ್ನು ಮಾಡಿದ್ದು ಈ ಸಂಬಂಧ ಓಂಬುಡ್ಸ್‌ಮೆನ್ ಜಿಲ್ಲಾ ಪಂಚಾಯತ್ ರವರು ದಿನಾಂಕ:11.05.16 ರ ತಮ್ಮ ಮಧ್ಯಂತರ ಆದೇಶದಲ್ಲಿ ನನ್ನ ಮೇಲೆ ಕಾನೂನಾತ್ಮಕ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಆದೇಶಿಸಿರುತ್ತಾರೆ ಎಂಬ ಕಪೋಲಕಲ್ಪಿತ ವಿಷಯವನ್ನು ಮುಂದಿಟ್ಟುಕೊಂಡು ನನ್ನ ಅಧ್ಯಕ್ಷ ಸ್ಥಾನಕ್ಕೆ ಕುತ್ತು ತರುವ ಹುನ್ನಾರ ನಡೆದಿರುತ್ತದೆ. ಮುಂದುವರಿದು ಓಂಬುಡ್ಸ್‌ಮೆನ್ ಜಿಲ್ಲಾ ಪಂಚಾಯತ್ ರವರ ಮಧ್ಯಂತರ ಆದೇಶದಲ್ಲಿ ಎಲ್ಲೂ ನನ್ನ ವಿರುದ್ಧ ಯಾವುದೇ ರೀತಿಯ ಆಪಾದನೆಯ ಪ್ರಸ್ತಾಪನೆಯಾಗಲಿ ಅಥವಾ ಆದೇಶವಾಗಲಿ ಇರುವುದಿಲ್ಲ. ಆದರೆ ನನ್ನ ಮೇಲೆ ಕ್ರಿಮಿನಲ್ ದಾವೆಯನ್ನು ಪ್ರಿನ್ಸಿಪಲ್ ಸೆಷನ್ ಜಡ್ಜ್ ರವರ ನ್ಯಾಯಾಲಯ ಶ್ರೀನಿವಾಸಪುರದಲ್ಲಿ ದಾಖಲೆಗೊಂಡಿದ್ದು ನನ್ನ ಮೇಲೆ ಕಲಂ 406,408,409,420 ಮತ್ತು 34 ಐ.ಪಿ.ಸಿ ರವರ ಆಪಾದನೆಯನ್ನು ಮಾಡಿರುತ್ತಾರೆ. ಸದರಿ ದಾವೆಗೆ

ಸಂಬಂಧ ಪಟ್ಟಂತೆ ಕ್ರಿಮಿನಲ್ Miselenions No.344/2016 ರಲ್ಲಿ ಜಾಮೀನು ಅರ್ಜಿ ಸಲ್ಲಿಸಿದ್ದು ನ್ಯಾಯಾಧೀಶರು ದಿ:29.06.2016 ರಂದು ಜಾಮೀನು ಮಂಜೂರು ಮಾಡಿರುತ್ತಾರೆ. ಈ ದಾವೆಯು ನ್ಯಾಯಾಲಯದಲ್ಲಿ ಬಾಕಿ ಇದ್ದು, ವಿಚಾರಣೆಯು ಪ್ರಾರಂಭವಾಗಿರುವುದಿಲ್ಲ ಆದುದರಿಂದ ಈ ಹಂತದಲ್ಲಿ ದೋಷಿ ಎಂದು ತೀರ್ಮಾನಿಸಲು ಕಾನೂನಿನಲ್ಲಿ ಅವಕಾಶ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

- " ನನ್ನ ಮೇಲೆ ಯಾವುದೇ ರೀತಿಯ ಆರೋಪ / ಆಪಾದನೆಗಳನ್ನು ಮಾಡಿರುವುದಿಲ್ಲ ಆದುದರಿಂದ ಕಲಂ43(ಎ) & ಕಲಂ 48(4)ರ ಅನ್ವಯ ಶಿಸ್ತು ಕ್ರಮ ತೆಗೆದುಕೊಳ್ಳಲು ಸರ್ಕಾರಕ್ಕೆ ಯಾವುದೇ ರೀತಿಯ ಅಧಿಕಾರವು ಇರುವುದಿಲ್ಲ. ನನ್ನ ಮೇಲೆ ಮಾಡಿರುವ ಆಪಾದನೆಗಳು ರುಜುವಾತು ಆಗದೇ ಇರುವ ಕಾರಣ ನನ್ನ ಮೇಲೆ ಜಾರಿ ಮಾಡಿದ ಕಾರಣ ಕೇಳುವ ನೋಟೀಸ್‌ನ್ನು ಹಿಂಪಡೆಯುವಂತೆ" ಕೋರಿರುತ್ತಾರೆ.
- "ನಾನು ಕಡಿಮೆ ವಿಧ್ಯಾಭ್ಯಾಸ ಹೊಂದಿದ್ದು, ನನಗೆ ಗಣಕಯಂತ್ರದ ನಿರ್ವಹಣೆ ಜ್ಞಾನ ಇರುವುದಿಲ್ಲ, ನನ್ನ ಅವಧಿಯಲ್ಲಿ ಯಾವುದೇ ವಿಧವಾದ ಅವ್ಯವಹಾರ ನಡೆದಿರುವುದಿಲ್ಲ ಮತ್ತು ಗ್ರಾಮ ಪಂಚಾಯಿತಿಯ ಅಧಿಕಾರಿಗಳ ಮಾರ್ಗದರ್ಶನದಂತೆ ಕಾರ್ಯನಿರ್ವಹಿಸುತ್ತಿದ್ದು ನನಗೆ ನ್ಯಾಯ ಒದಗಿಸಿಕೊಡುವಂತೆ" ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿ ಮಾನ್ಯ ಕಾರ್ಯದರ್ಶಿಯವರ ನ್ಯಾಯಾಲಯದಲ್ಲಿ ದಿ:29.05.2017 ರಂದು ನಡೆದ ವಿಚಾರಣೆಗೆ ಹಾಜರಾಗಿದ್ದು ಮುಂದಿನ ವಿಚಾರಣೆಯನ್ನು ದಿ:06.06.2017 ರಂದು ಮುಂದೂಡಲಾಯಿತು. ದಿ:06.06.2017 ರಂದು ಮಾನ್ಯ ಕಾರ್ಯದರ್ಶಿಯವರ ನ್ಯಾಯಾಲಯದಲ್ಲಿ ನಡೆದ ವಿಚಾರಣೆಯಲ್ಲಿ ಆರೋಪಿತರ ಪರ ವಕೀಲರು ಹಾಜರಿದ್ದು ತಮ್ಮ ಹೇಳಿಕೆ ನೀಡಲು ಸಮಯ ಹಾಗೂ ದಾಖಲಾತಿಗಳನ್ನು ಒದಗಿಸಲು ಕೋರಿದ್ದು ಸದರಿ ಎಲ್ಲಾ ದಾಖಲಾತಿಗಳನ್ನು ಒದಗಿಸಲು ಜಿಲ್ಲಾ ಪಂಚಾಯತ್ ಅಧಿಕಾರಿಗಳಿಗೆ ಆದೇಶಿಸಿ ಮುಂದಿನ ವಿಚಾರಣೆಯನ್ನು ದಿ:15.07.2017 ಕ್ಕೆ ಮುಂದೂಡಲಾಯಿತು. ದಿ:15.07.2017 ರಂದು ಮಾನ್ಯ ಕಾರ್ಯದರ್ಶಿಯವರ ನ್ಯಾಯಾಲಯದಲ್ಲಿ ನಡೆದ ವಿಚಾರಣೆಯಲ್ಲಿ ಇಬ್ಬರು ಅಧ್ಯಕ್ಷರು ಹಾಗೂ ಅವರ ಪರವಾಗಿ ವಕೀಲರು ಹಾಜರಿದ್ದು ತಮಗೆ ಕಂಪ್ಲೇಂಟ್ ಪ್ರತಿ ತಲುಪಿರುವುದಿಲ್ಲ ಎಂದು ತಿಳಿಸಿದ್ದು, ಅದಕ್ಕೆ ಉತ್ತರವಾಗಿ ಜಿಲ್ಲಾ ಪಂಚಾಯಿತಿಯಿಂದ ಎಲ್ಲಾ ದಾಖಲಾತಿಗಳನ್ನು ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿರುತ್ತಾರೆ. ಆದಗ್ಯೂ ಮತ್ತೊಮ್ಮೆ ಕಂಪ್ಲೇಂಟ್ ಪ್ರತಿಯನ್ನು ನೀಡಲು ಸೂಚಿಸಿ ಮುಂದಿನ ವಿಚಾರಣೆಯನ್ನು ದಿ:05.08.2017 ಕ್ಕೆ ಮುಂದೂಡಲಾಯಿತ್ತು. ದಿ:05.08.2017 ರಂದು ಮಾನ್ಯ ಕಾರ್ಯದರ್ಶಿಯವರ ನ್ಯಾಯಾಲಯದಲ್ಲಿ ನಡೆದ ವಿಚಾರಣೆಯಲ್ಲಿ ಆಪಾಧಿತ ಅಧ್ಯಕ್ಷರು ಹಾಗೂ ಅವರ ಪರವಾದ ವಕೀಲರು ಹಾಜರಿದ್ದು, ತಮ್ಮ ಹೇಳಿಕೆ, ಆಕ್ಷೇಪಣೆ ಹಾಗೂ ಕೆಲವು ಜಡ್ಜ್‌ಮೆಂಟ್‌ನ್ನು ಸಹ ತಮ್ಮ ಸಮರ್ಥನೆಗಾಗಿ ಸಲ್ಲಿಸಿ ವಾದವನ್ನು ಮಂಡಿಸಿರುತ್ತಾರೆ. ಆದೇಶಕ್ಕಾಗಿ ದಿ:06.02.2019 ಕ್ಕೆ ಮುಂದೂಡಲಾಗಿತ್ತು. ದಿ:06.02.2019 ರಂದು ಮಾನ್ಯ ಕಾರ್ಯದರ್ಶಿಯವರ ನ್ಯಾಯಾಲಯದಲ್ಲಿ ನಡೆದ ವಿಚಾರಣೆಯಲ್ಲಿ ಆಪಾದಿತರುಗಳು ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ. ಹಾಗೂ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಯವರು ಪಿಎಂಜಿಎಸ್‌ವೈ ಕಾಮಗಾರಿಗಳನ್ನು ಎನ್‌ಆರ್‌ಇಜಿ ಯೋಜನೆಯಡಿ ಅನುಷ್ಠಾನಗೊಳಿಸಿರುವುದಾಗಿ ಬಿಂಬಿಸಿ ಅವ್ಯವಹಾರ ಎಸಗಿರುವುದಾಗಿ ತಿಳಿಸಿದರು. ಎನ್‌ಆರ್‌ಇಜಿ ಯೋಜನೆಯಡಿ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುತ್ತದೆ ಹಾಗೂ ಹೆಚ್ಚುವರಿಯಾಗಿ ಜಾಬ್ ಕಾರ್ಡ್‌ಗಳನ್ನು ವಿತರಿಸಿ ಅವ್ಯವಹಾರ ಎಸಗಿರುವುದಾಗಿ ತಿಳಿಸಿರುತ್ತಾರೆ. ಈ ಪ್ರಕರಣದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಹಾಯಕ ಕಾರ್ಯಪಾಲಕ ಅಭಿಯಂತರು, ಇಂಜಿನಿಯರ್‌ಗಳ ಮೇಲೆ ಶಿಸ್ತು ಕ್ರಮ ಜರುಗಿಸಲಾಗಿದೆ ಹಾಗೂ ತಾಂತ್ರಿಕ ಸಹಾಯಕರು & ಡಾಟಾ ಎಂಟ್ರಿ ಆಪರೇಟರ್‌ರವರನ್ನು ಸೇವೆಯಿಂದ ವಜಾ ಮಾಡಲಾಗಿದೆ ಎಂದು ತಿಳಿಸಿದರು. ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿತ್ತು.

ಸರ್ಕಾರವು ಲಭ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು, ದಾಖಲಾತಿಗಳು, ಹಾಜರಿದ್ದ ಅಧಿಕಾರಿಗಳ ಹೇಳಿಕೆಗಳು, ಆಪಾದಿತರ ಲಿಖಿತ ಮತ್ತು ಮೌಖಿಕ ಹೇಳಿಕೆಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಸಲ್ಲಿಸಿರುವ ತನಿಖಾ ವರದಿಯನ್ನು ಪರಿಶೀಲಿಸಿ, ಸದರಿ ಅಧ್ಯಕ್ಷರುಗಳು ಸ್ವಹಿತಾಸಕ್ತಿಯಿಂದ ಅಧಿಕಾರ ದುರ್ಬಳಕೆ ಮಾಡಿಕೊಂಡಿರುವುದು ಹಾಗೂ ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡು ದುರ್ನಡತೆ ಮತ್ತು ಕರ್ತವ್ಯಲೋಪ ಎಸಗಿರುವುದು ಸಾಬೀತಾಗಿರುತ್ತದೆ. ಜಿಲ್ಲಾ ಪಂಚಾಯತ್ ಜಿಲ್ಲಾ ಪಂಚಾಯತ್ ಕೋಲಾರ ರವರು 'ಶ್ರೀಮತಿ ಆದಿಲಕ್ಷ್ಮಮ್ಮ, ಅಧ್ಯಕ್ಷರು ಲಕ್ಷ್ಮೀಪುರ ಗ್ರಾಮ ಪಂಚಾಯಿತಿ ಮತ್ತು ಶ್ರೀಮತಿ ಡಿ ಪ್ರಮೀಳ, ಅಧ್ಯಕ್ಷರು, ನೆಲವಂಕಿ ಗ್ರಾಮ ಪಂಚಾಯತಿ, ಶ್ರೀನಿವಾಸಪುರ ತಾಲ್ಲೂಕುರವರು ಪ್ರಸ್ತುತ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿರುವುದಿಲ್ಲ' ಎಂದು ತಿಳಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ) ರನ್ವಯ ಶ್ರೀಮತಿ ಆದಿಲಕ್ಷ್ಮಮ್ಮ, ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಲಕ್ಷ್ಮೀಪುರ ಗ್ರಾಮ ಪಂಚಾಯಿತಿ ಮತ್ತು ಶ್ರೀಮತಿ ಡಿ.ಪ್ರಮೀಳ ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು, ನೆಲವಂಕಿ ಗ್ರಾಮ ಪಂಚಾಯಿತಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ, ಇವರನ್ನು ಸದರಿ ಗ್ರಾಮ ಪಂಚಾಯಿತಿಯ ಸದಸ್ಯ ಸ್ಥಾನದಿಂದ ತೆಗೆದು ಹಾಕಲು ನಿರ್ಣಯಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

(10)

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 99 ಗ್ರಾಪಂಅ 2017,**
**ಬೆಂಗಳೂರು, ದಿನಾಂಕ: .10.2019.**

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಅಧಿಕಾರ
ದುರ್ಬಳಕೆ ಹಾಗೂ ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡು ದುರ್ನಡತೆ ಮತ್ತು ಕರ್ತವ್ಯ ಲೋಪ
ಎಸಗಿರುವುದು ಸಾಬೀತಾಗಿರುತ್ತದೆ. ಹಣ ದುರಪಯೋಗಕ್ಕೆ ಕುರಿತು ನೀಡಿರುವ ಶಿಫಾರಸಿನ್ವಯ ಕೋಲಾರ ಜಿಲ್ಲೆ,
ಶ್ರೀನಿವಾಸಪುರ ತಾಲ್ಲೂಕು, ಲಕ್ಷ್ಮೀಪುರ ಗ್ರಾಮ ಪಂಚಾಯಿತಿಯ ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರಾದ
ಶ್ರೀಮತಿ ಆದಿಲಕ್ಷ್ಮಮ್ಮ, ರವರು ರೂ.17,71,000/- ಮತ್ತು ನೆಲವಂಕಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರು
ಹಾಗೂ ಹಾಲಿ ಸದಸ್ಯರಾದ ಶ್ರೀಮತಿ ಡಿ.ಪ್ರಮೀಳ ರವರು ರೂ.19,22,106/-ಗಳನ್ನು ಸದರಿ ಗ್ರಾಮ
ಪಂಚಾಯಿತಿಗಳಲ್ಲಿ ಪಿಎಂಜಿಎಸ್‌ವೈ ಕಾಮಗಾರಿಗಳನ್ನು ಎನ್‌ಆರ್‌ಇಜಿ ಯೋಜನೆಯಡಿ
ಅನುಷ್ಠಾನಗೊಳಿಸಿರುವುದಾಗಿ ಬಿಂಬಿಸಿ ಅವ್ಯವಹಾರ ಎಸಗಿರುವುದು ಮತ್ತು ಎನ್‌ಆರ್‌ಇಜಿ ಯೋಜನೆಯಡಿ
ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುತ್ತದೆ ಹಾಗೂ ಹೆಚ್ಚುವರಿಯಾಗಿ ಜಾಬ್ ಕಾರ್ಡ್ ಗಳನ್ನು ವಿತರಿಸಿ
ಅಧಿಕಾರ ದುರ್ಬಳಕೆ, ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡು ದುರ್ನಡತೆ ಮತ್ತು ಕರ್ತವ್ಯ ಲೋಪ
ಎಸಗಿರುವುದು ಸಾಬೀತಾಗಿರುವುದನ್ನು ಗಮನಿಸಿ, ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು
ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43-ಎ ರನ್ವಯ ಶ್ರೀಮತಿ ಆದಿಲಕ್ಷ್ಮಮ್ಮ, ಮಾಜಿ ಅಧ್ಯಕ್ಷರು
ಹಾಗೂ ಹಾಲಿ ಸದಸ್ಯರು, ಲಕ್ಷ್ಮೀಪುರ ಗ್ರಾಮ ಪಂಚಾಯಿತಿ ಮತ್ತು ಶ್ರೀಮತಿ ಡಿ.ಪ್ರಮೀಳ, ಮಾಜಿ ಅಧ್ಯಕ್ಷರು
ಹಾಗೂ ಹಾಲಿ ಸದಸ್ಯರು, ನೆಲಂವಕಿ ಗ್ರಾಮ ಪಂಚಾಯಿತಿ ಇವರ ಗ್ರಾಮ ಪಂಚಾಯಿತಿಯ ಸದಸ್ಯತ್ವವನ್ನು
ರದ್ದುಪಡಿಸಿ ಆದೇಶಿಸಿದೆ. ಹಾಗೂ ಇವರುಗಳಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟವನ್ನು ವಸೂಲು ಮಾಡಲು ಭೂ
ಕಂದಾಯ ಕಾಯ್ದೆಯನ್ವಯ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಕೋಲಾರ ರವರಿಗೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Narayan ...
24/10/19

(ಡಿ.ಜಿ.ನಾರಾಯಣ)
ಉಪ ನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
24/10/19

ಗೆ:

1) ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಕೋಲಾರ ಜಿಲ್ಲಾ ಪಂಚಾಯಿತಿ, ಕೋಲಾರ ಜಿಲ್ಲೆ.
2) ಕಾರ್ಯನಿರ್ವಾಹಕಾಧಿಕಾರಿ, ಶ್ರೀನಿವಾಸಪುರ ತಾಲ್ಲೂಕು ಪಂಚಾಯಿತಿ, ಕೋಲಾರ ಜಿಲ್ಲೆ.
3) ಶ್ರೀಮತಿ ಆದಿಲಕ್ಷ್ಮಮ್ಮ, ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಲಕ್ಷ್ಮೀಪುರ ಗ್ರಾಮ ಪಂಚಾಯಿತಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ.
4) ಶ್ರೀಮತಿ ಡಿ.ಪ್ರಮೀಳ, ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು, ನೆಲವಂಕಿ ಗ್ರಾಮ ಪಂಚಾಯಿತಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ.
5) ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
6) ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.